ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ವರ್ಗಾವಣೆಗಳ ಬಗ್ಗೆ

೫೫೦. ಶ್ರೀ ಬಾಬುರೆಡ್ಡಿ ತುಂಗಲ್ (ಬೀಳಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ರಲ್ಲಿ ರಾಜ್ಯ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಮಾಡಿರುವ ವರ್ಗಾವಣೆಗಳೆಷ್ಟು, ಮತ್ತು ಈ ವಿಷಯದಲ್ಲಿ ಪ್ರಯಾಣ ಭತ್ಯೆ ಎಂದು ನೀಡಿದ ಹಣವೆಷ್ಟು;

ಆ) ರಾಜ್ಯದಾದ್ಯಂತ ಅಭಾವ ಪರಿಸ್ಥಿತಿ ಎದುರಿಸಲು ಸಹಾಯಕವಾಗುವಂತೆ ರಾಜ್ಯ ಸರ್ಕಾರದ ಎಲ್ಲಾ ನೌಕರರೂ ಒಂದು ದಿನದ ವೇತನವನ್ನು ಸಲ್ಲಿಸಿರುವಾಗ ಇಂಥ ಸಾಮೂಹಿಕ ವರ್ಗಾವಣೆಗಳ ಅಗತ್ಯವಿತ್ತೇ,

ಇ) ವರ್ಗಾಯಿಸಲ್ಪಟ್ಟವರಲ್ಲಿ ಪುರುಷ ಹಾಗೂ ಮಹಿಳೆಯರು ಎಷ್ಟು, ಅವರಲ್ಲಿ ವಿವಾಹಿತರು ಎಷ್ಟು, ಮದುವೆಯಾದ ದಂಪತಿಗಳು ನೋಂದಣಿ ಪುಸ್ತಕ ಇಡಲಾಗಿದೆಯೇ;

ಈ) ಈ ಸಾಮೂಹಿಕ ವರ್ಗಾವಣೆಯಲ್ಲಿ ಎಷ್ಟು ಜನ ದಂಪತಿಗಳನ್ನು ಪ್ರತ್ಯೇಕಿಸಲಾಯಿತು ಮತ್ತು ಸರ್ಕಾರದವರ ಆದೇಶದ ಉಲ್ಲಂಘನೆ ನಡೆದಿಲ್ಲವೇ,

ಉ) ಹಾಗಿದ್ದರೆ ಸರ್ಕಾರಿ ಆಜ್ಞೆಯನ್ನು ಉಲ್ಲಂಘಿಸಿದ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ವಿರೋಧ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ತಾಂತ್ರಿಕ ಶಿಕ್ಷಣ ಇಲಾಖಾ ನಿರ್ದೇಶಕರು ೧೯೮೬ನೇ ಸಾಲಿನ ಸಾಮಾನ್ಯ ವರ್ಗಾವಣೆಯಲ್ಲಿ ಒಟ್ಟು ೪೧೦ ಸಿಬ್ಬಂದಿ ವರ್ಗದವರನ್ನು ವರ್ಗಾವಣೆ ಮಾಡಿದ್ದಾರೆ. ಇದಕ್ಕೆ ತಗಲಿದ ಪ್ರಯಾಣ ಭತ್ಯೆಯ ಖರ್ಚು ರೂ. ೧,೨೩,೪೬೦೦ ಆಗಿರುತ್ತದೆ.

ಆ) ಸಾಮಾನ್ಯ ವರ್ಗಾವಣೆಗಳನ್ನು ಸರ್ಕಾರದ ಆದೇಶಗಳ ಪ್ರಕಾರ ಮಾಡಲಾಗಿದೆ. ಸಾರ್ವತ್ರಿಕ ವರ್ಗಾವಣೆ ಸರ್ಕಾರ ನಿಯಮಾನುಸಾರ ಆಗತ್ಯವಿದೆ.

ಇ) ವರ್ಗಾಯಿಸಲ್ಪಟ್ಟ ೪೧೦ ಸಿಬ್ಬಂದಿಯಲ್ಲಿ ೩೭೭ ಜನ ಪುರುಷರು, ೩೩ ಜನ ಮಹಿಳೆಯರು, ಸಿಬ್ಬಂದಿಯ ವಿವಾಹದ ಬಗ್ಗೆ ವಿವರಗಳನ್ನು ಪ್ರತ್ಯೇಕವಾಗಿ ಇಡಬೇಕಾಗಿಲ್ಲದ ಕಾರಣ, ಇವರಲ್ಲಿನ ವಿವಾಹಿತರ ಸಂಖ್ಯೆಯು ಲಭ್ಯವಿಲ್ಲ

ಈ) ಈ ಸಾಮಾನ್ಯ ವರ್ಗಾವಣೆಯಲ್ಲಿ ರಾಜ್ಯ ಸರ್ಕಾರಿ ನೌಕರಿಯಲ್ಲಿರುವ ೦ ದಂಪತಿಗಳನ್ನು ಪ್ರತ್ಯೇಕಿಸಲಾಗಿದೆ. ಆದರೆ, ಅವರ ಮನವಿಗಳನ್ನು ಪರಿಗಣಿಸಿ ಅವರ ಮೊದಲಿನ ಸ್ಥಳಗಳಿಗೆ ಮರು ವರ್ಗಾವಣೆ ಮಾಡಲಾಗಿದೆ. ಇವರೆಲ್ಲರೂ ಒಂದೇ ಸ್ಥಳದಲ್ಲಿ ಗರಿಷ್ಠ ಮಿತಿಯ ಕಾಲಾವಧಿಯನ್ನು ಪೂರೈಸಿದ್ದರಿಂದ ವರ್ಗಾಯಿಸಲಾಗಿದ್ದು, ಸರ್ಕಾರದ ಆದೇಶ ಉಲ್ಲಂಘನೆ ನಡೆದಿಲ್ಲ

ಉ) ಮೇಲೆ (ಈ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ಕಾಂಪೋಸ್ಟ್ ನಿಗಮ ಕುರಿತಂ

೫೫೧. ಶ್ರೀ ಬಾಬುರೆಡ್ಡಿ ತಂಗಲ್ (ಬೀಳಗಿ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಕಾಂಪೋಸ್ಟ್ ನಿಗಮ ಎಂಬುದು ಸದ್ಯದಲ್ಲಿ ಅಸ್ತಿತ್ವದಲ್ಲಿಯೇ,

ಆ) ಇದ್ದರೆ ಅದರ ಕಾರ್ಯ ಹಾಗೂ ವ್ಯಾಪ್ತಿ ಏನು;

ಇ) ಈ ನಿಗಮ ಸ್ಥಾಪನೆಯಾದಾಗ ಅದಕ್ಕೆ ಹಾಕಿದ ಬಂಡವಾಳವೆಷ್ಟು, ಯಾವ ಏಜೆನ್ಸಿಗಳು ಇಲ್ಲಿ ಬಂಡವಾಳ ತೊಡಗಿಸಿವೆ;

ಈ) ಈವರೆಗೆ ಅದು ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೇನು,